**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

# ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ಅಧಿನಿಯಮ, 1979

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟವಾಗಿದೆ.

# ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ಅಧಿನಿಯಮ, 1979

# ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಅಧಿನಿಯಮ, 1979

## ವಿಷಯಾನುಕ್ರಮಣಿಕೆ

ಪ್ರಕರಣಗಳು


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ ... 1
2 ಪರಿಭಾಷೆಗಳು ... 1
3. ನಗರ ಸಿವಿಲ್ ನ್ಯಾಯಾಲಯದ ಸ್ಥಾಪನೆ ... 2
4. ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವುದು ಮತ್ತು ಅದರ ಅಧೀಕ್ಷಣೆಯಲ್ಲಿರುವುದು ... 4
5. ನ್ಯಾಯಾಧೀಶರ ಅಧಿಕಾರಗಳು ... 4
6. ನಗರ ಸಿವಿಲ್ ನ್ಯಾಯಾಲಯದ ನಗರದ ಮುಖ್ಯ ಸಿವಿಲ್ ನ್ಯಾಯಾಧೀಶನ ಪದದ ತಾತ್ಕಾಲಿಕ ರಿಕ್ತತೆ ... 4
7. ರಿಜಿಸ್ಟ್ರಾರ್ ಇತ್ಯಾದಿ ... 5
8. ಅಧಿನಿಯಮದ ಮೇರೆಗೆ ದಾವೆ ಇತ್ಯಾದಿಗಳ ಸಂಬಂಧದಲ್ಲಿ ಉದ್ಭವಿಸಿದ ಪ್ರಶ್ನೆಗಳ ಬಗ್ಗೆ ಜಿಲ್ಲಾ ನ್ಯಾಯಾಲಯದ ಕಾನೂನಿನ ನಿರ್ವಹಣೆಗನುಸಾರವಾಗಿ ವ್ಯವಹರಿಸತಕ್ಕದ್ದು. ... 5
9. ಅಪೀಲುಗಳು ಮತ್ತು ಅವಧಿ ಪರಿಮಿತಿಗಳು ... 6
10. ನ್ಯಾಯಾಲಯದ ಮೊಹರು ... 6
11. ರಜಾದಿನಗಳು ಮತ್ತು ದೀರ್ಘಾವದಿ ರಜಾ ದಿನಗಳು ... 6
12. ಇತರ ಕಾನೂನುಗಳ ಸಂಬಂಧದಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ, ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ, ಮುನ್ಸಿಫ್ ನ್ಯಾಯಾಲಯಕ್ಕೆ, ಜಿಲ್ಲಾ ನ್ಯಾಯಾಧೀಶನಿಗೆ, ಸಿವಿಲ್ ನ್ಯಾಯಾಧೀಶನಿಗೆ ಮತ್ತು ಮುನ್ಸೀಫನಿಗೆ ಉಲ್ಲೇಖಗಳನ್ನು ಮಾಡುವುದು ... 7
13. ನ್ಯಾಯಾಧೀಶನು ತಮಗೆ ಹಿತಾಸಕ್ತಿ ಇರುವ ದಾವೆಗಳ ವಿಚಾರಣೆ ನಡೆಸತಕ್ಕದ್ದಲ್ಲ ... 8
14. ನಿಯಮ ರಚನಾಧಿಕಾರ ... 9
15. 1961ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ ... 9
16. 1962ರ ಕರ್ನಾಟಕ ಅಧಿನಿಯಮ 5ರ ತಿದ್ದುಪಡಿ ... 10
17. 1964ರ ಕರ್ನಾಟಕ ಅಧಿನಿಯಮ 11ರ ತಿದ್ದುಪಡಿ ... 11
18. 1964ರ ಕರ್ನಾಟಕ ಅಧಿನಿಯಮ 21ರ ತಿದ್ದುಪಡಿ ... 12
19. ಇತ್ಯರ್ಥವಾಗದಿರುವ ದಾವೆ, ಇತ್ಯಾದಿಗಳ ವರ್ಗಾವಣೆಗೆ ವಿಶೇಷ ಉಪಬಂಧಗಳು ... 13
20. 1979ರ ಕರ್ನಾಟಕ ಅಧ್ಯಾದೇಶ ಕ್ರಮಾಂಕ 8ರ ನಿರಸನ ... 19

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**
**ಅಧಿಸೂಚನೆ**
**ನಂ. ಲಾ 58 ಎಲ್‌ಎಂಪಿ 82 ದಿನಾಂಕ 8ನೇ ಆಗಸ್ಟ್ 1985**

1963ರ ಕರ್ನಾಟಕ ರಾಜಭಾಷಾ ಅಧಿನಿಯಮದ (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 26)ರ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಪ್ರಯೋಗಿಸಿ ಕರ್ನಾಟಕ ರಾಜ್ಯಪಾಲನಾದ ನಾನು ಶ್ರೀ ಎ.ಎನ್. ಬ್ಯಾನರ್ಜಿ, ಬೆಂಗಳೂರು ನಗರ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1979 (ಕರ್ನಾಟಕ ಅಧಿನಿಯಮ 1980ರ) 13ರ ಈ ಕೆಳಗಿನ ಕನ್ನಡ ಅನುವಾದವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಎ.ಎನ್. ಬ್ಯಾನರ್ಜಿ,**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ
**ಎಂ. ಉಮೇಶ್,**
ಸರ್ಕಾರದ ಕಾರ್ಯದರ್ಶಿ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ,
(ಆಡಳಿತ–2).

**1980ರ ಕರ್ನಾಟಕ ಅಧಿನಿಯಮ ಕ್ರಮಾಂಕ 13**

(1980ರ ಏಪ್ರಿಲ್ 17ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

# ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಅಧಿನಿಯಮ, 1979

(1980ರ ಏಪ್ರಿಲ್ 8ನೇ ದಿನಾಂಕದಂದು ರಾಷ್ಟ್ರಪತಿಯವರ ಅನುಮತಿ ಪಡೆದಿದೆ)

ಬೆಂಗಳೂರು ನಗರದಲ್ಲಿ ನಗರ ಸಿವಿಲ್ ನ್ಯಾಯಾಲಯವನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಬೆಂಗಳೂರು ನಗರದಲ್ಲಿ ನಗರ ಸಿವಿಲ್ ನ್ಯಾಯಾಲಯವನ್ನು ಸ್ಥಾಪಿಸುವ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದು ಅವಶ್ಯಕವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿಸಲಾಗಿದೆ, ಎಂದರೆ:–

## ಅಧ್ಯಾಯ–I
## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಅಧಿನಿಯಮ, 1979 ಎಂದು ಕರೆಯತಕ್ಕದ್ದು.

(2) ಈ ಪ್ರಕರಣವು 1979ರ ಆಗಸ್ಟ್ ಮೂವತ್ತೊಂದನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು. [1][ಹದಿನೇಳನೇ ಪ್ರಕರಣದ (2ಕ) ಖಂಡವು ಈ ಕೂಡಲೇ ಜಾರಿಗೆ ಬರತಕ್ಕದು] ಮತ್ತು ಇತರ ಉಪಬಂಧಗಳು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ–

---

1 1980ರ ತಿದ್ದುಪಡಿ ಅಧಿನಿಯಮದ [1980ರ 23] 1ನೇ ಪ್ರಕರಣದ ಮೇರೆಗೆ ಸೇರಿಸಲಾಗಿದೆ.

(1) ಗೊತ್ತುಪಡಿಸಿದ ದಿನಾಂಕ ಎಂದರೆ, 1ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅಧಿಸೂಚಿಸಲಾದ ದಿನಾಂಕ;

[2](2) ಬೆಂಗಳೂರು ನಗರ ಎಂದರೆ, 1973ರ ದಂಡ ಪ್ರಕ್ರಿಯಾ ಸಂಹಿತೆಯ 1974ರ ಕೇಂದ್ರ ಅಧಿನಿಯಮ, (2) 8ನೇ ಪ್ರಕರಣದ ಮೇರೆಗೆ ಘೋಷಿಸಿದ ಬೆಂಗಳೂರು ನಗರವನ್ನೊಳಗೊಂಡ ಮಹಾನಗರ ಪ್ರದೇಶದಲ್ಲಿ ತತ್ಕಾಲದಲ್ಲಿ ಸೇರಿರುವ ಪ್ರದೇಶ];

(3) 'ನಗರ ಸಿವಿಲ್ ನ್ಯಾಯಾಲಯ' ಎಂದರೆ, 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಲಯ';

(4) 'ಲಘು ವ್ಯಾಜ್ಯಗಳ ನ್ಯಾಯಾಲಯ,' ಎಂದರೆ ಬೆಂಗಳೂರು ನಗರಕ್ಕಾಗಿ 1964ರ ಕರ್ನಾಟಕ ಲಘು ವ್ಯಾಜ್ಯ ನ್ಯಾಯಾಲಯಗಳ ಅಧಿನಿಯಮ (1964ರ ಕರ್ನಾಟಕ ಅಧಿನಿಯಮ 11) ಮೇರೆಗೆ ರಚಿತವಾದ ವ್ಯಾಜ್ಯಗಳ ನ್ಯಾಯಾಲಯ;

(5) 'ಉಚ್ಚ ನ್ಯಾಯಾಲಯ' ಎಂದರೆ, ಕರ್ನಾಟಕದ ಉಚ್ಚ ನ್ಯಾಯಾಲಯ;

---

2. 1980ರ ತಿದ್ದುಪಡಿ ಅಧಿನಿಯಮದ [1980ರ 23] 2ನೇ ಪ್ರಕರಣದ ಮೇರೆಗೆ ಬದಲಾಗಿ ಹಾಕಲಾಗಿದೆ.

(6) 'ನ್ಯಾಯಾಧೀಶ' ಎಂದರೆ ಮುಖ್ಯ ನಗರ ಸಿವಿಲ್ ನ್ಯಾಯಾಧೀಶ ಮತ್ತು ನಗರ ಸಿವಿಲ್ ನ್ಯಾಯಾಲಯದ ನಗರ ಸಿವಿಲ್ ನ್ಯಾಯಾಧೀಶ; ಮತ್ತು

(7) 'ವಿಧಿ' ಎಂಬುದರಲ್ಲಿ ಯಾವುದೇ ಅಧಿನಿಯಮ, ಅಧ್ಯಾದೇಶ, ವಿನಿಯಮನ, ಆದೇಶ, ಉಪವಿಧಿ, ನಿಯಮಗಳು, ಯೋಜನೆ, ಅಧಿಸೂಚನೆ ಅಥವಾ ವಿಧಿಯ ಬಲವಿರುವ ಯಾವುದೇ ಲಿಖಿತವನ್ನು ಒಳಗೊಳ್ಳುತ್ತದೆ.

## ಅಧ್ಯಾಯ–II
## ಬೆಂಗಳೂರು ನಗರಕ್ಕಾಗಿ ನಗರ ಸಿವಿಲ್ ನ್ಯಾಯಾಲಯದ ಸ್ಥಾಪನೆ

3. **ನಗರ ಸಿವಿಲ್ ನ್ಯಾಯಾಲಯದ ಸ್ಥಾಪನೆ.–** (1) ಗೊತ್ತುಪಡಿಸಿದ ದಿನಾಂಕದಿಂದ ಬೆಂಗಳೂರು ನಗರಕ್ಕೆ ನಗರ ಸಿವಿಲ್ ನ್ಯಾಯಾಲಯವು ಇರತಕ್ಕದು.

(2) ನಗರ ಸಿವಿಲ್ ನ್ಯಾಯಾಲಯವು ಮುಖ್ಯ ನಗರ ಸಿವಿಲ್ ನ್ಯಾಯಾಧೀಶರನ್ನೂ ಮತ್ತು ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿ ನಿರ್ಧರಿಸಬಹುದಾದಷ್ಟು ಸಂಖ್ಯೆಯ ಇತರ ನಗರ ಸಿವಿಲ್ ನ್ಯಾಯಾಧೀಶರನ್ನು ಒಳಗೊಂಡಿರತಕ್ಕದ್ದು.

(3) ಯಾವುದೇ ವಿಧಿಯಲ್ಲಿ ಏನೇ ಒಳಗೊಂಡಿದ್ದರೂ ನಗರ ಸಿವಿಲ್ ನ್ಯಾಯಾಲಯವು;

(ಎ) ಬೆಂಗಳೂರು ನಗರದಲ್ಲಿ ಮೂಲ ಅಧಿಕಾರ ವ್ಯಾಪ್ತಿಯನ್ನುಳ್ಳ ಮುಖ್ಯ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(ಬಿ) ಸಿವಿಲ್ ಸ್ವರೂಪದ ಮತ್ತು ಬೆಂಗಳೂರು ನಗರದಲ್ಲಿ ಉದ್ಭವಿಸುವ ಉಚ್ಚ ನ್ಯಾಯಾಲಯದಿಂದ ಮತ್ತು ಲಘು ವ್ಯಾಜ್ಯಗಳ ನ್ಯಾಯಾಲಯದಿಂದ ಸಂಜ್ಞೇಯವಾದ ದಾವೆಗಳ ಮತ್ತು ವ್ಯವಹರಣೆಗಳ ಹೊರತಾಗಿ ಎಲ್ಲ ದಾವೆಗಳನ್ನು ಮತ್ತು ವ್ಯವಹರಣೆಗಳನ್ನು ಸ್ವೀಕರಿಸಲು, ವಿಚಾರಣೆ ಮಾಡಲು ಮತ್ತು ವಿಲೆ ಮಾಡಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದು.

(4) 1964ರ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮ 21) ಮೇರೆಗೆ ಸ್ಥಾಪಿತವಾದ ಜಿಲ್ಲಾ ನ್ಯಾಯಾಲಯಗಳು, ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳು ಮತ್ತು ಮುನ್ಸಿಫ್ ನ್ಯಾಯಾಲಯಗಳು.

(ಎ) ಗೊತ್ತುಪಡಿಸಿದ ದಿನಾಂಕದ ತತ್ಪೂರ್ವದಲ್ಲಿ ಬೆಂಗಳೂರು ನಗರದ ಸ್ಥಳೀಯ ಪರಿಮಿತಿಗಳೊಳಗೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿರುವುದು, ಸದರಿ ದಿನಾಂಕದಂದು ಮತ್ತು ಆ ದಿನಾಂಕದಿಂದ ಪ್ರಕಾರ್ಯಗಳನ್ನು ನಡೆಸುವುದು ನಿಂತುಹೋಗತಕ್ಕದು ಮತ್ತು ಅವುಗಳನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

(ಬಿ) ಗೊತ್ತುಪಡಿಸಿದ ದಿನಾಂಕದ ತತ್ಪೂರ್ವದಲ್ಲಿ ಬೆಂಗಳೂರು ನಗರ ಸ್ಥಳೀಯ ಪರಿಮಿತಿಗಳೊಳಗೆ ಹಾಗೂ ಹೊರಗೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿರುವುದು ಸದರಿ ದಿನಾಂಕದಂದು ಮತ್ತು ಆ ದಿನಾಂಕದಿಂದ ಬೆಂಗಳೂರು ನಗರದ ಸ್ಥಳೀಯ ಪರಿಮಿತಿಗಳೊಳಗೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದು ನಿಂತುಹೋಗತಕ್ಕದ್ದು.

(5) (4)ನೇ ಉಪಪ್ರಕರಣದಲ್ಲಿರುವುದಾವುದೂ ಆ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನ್ಯಾಯಾಲಯಗಳ ಪೈಕಿ ಯಾವುದೇ ನ್ಯಾಯಾಲಯಗಳಿಗೆ ಪ್ರದತ್ತವಾದ ಅಧಿಕಾರದ ಮೇರೆಗೆ ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು ಜಾರಿ ಮಾಡಿರುವ ಯಾವುದೇ ನೋಟೀಸು, ನೀಡಿರುವ ನಿರ್ಬಂಧಾಕಾಜ್ಞೆ, ನೀಡಿರುವ ನಿರ್ದೇಶನ, ನಡೆಸಿರುವ ವ್ಯವಹರಣೆಗಳು ತೀರ್ಣಗೊಳಿಸಿರುವ ಯಾವುದೇ ಆಜ್ಞಪ್ತಿ ಅಥವಾ ಆದೇಶ ಇವುಗಳ ಕಾರ್ಯಾಚರಣೆಯನ್ನು ಮುಂದುವರಿಸುವುದಕ್ಕೆ ಪ್ರತಿಕೂಲ ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

**4. ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವುದು ಮತ್ತು ಅದರ ಅಧೀಕ್ಷಣೆಯಲ್ಲಿರುವುದು.–** ನಗರ ಸಿವಿಲ್ ನ್ಯಾಯಾಲಯವು ಉಚ್ಚ ನ್ಯಾಯಾಲಯದ ಅಧೀನದಲ್ಲಿರುವ ನ್ಯಾಯಾಲಯ [3][ವೆಂದು] ಮತ್ತು ಅದರ ನಿಯಂತ್ರಣಕ್ಕೆ ಮತ್ತು ಅಧೀಕ್ಷಣೆಗೊಳಪಟ್ಟಿರತಕ್ಕದ್ದೆಂದು ಭಾವಿಸತಕ್ಕದ್ದು.

**5. ನ್ಯಾಯಾಧೀಶರ ಅಧಿಕಾರಗಳು.–** (1) ಅಧಿನಿಯಮದ ಇತರ ಉಪ ಬಂಧಗಳಿಗೊಳಪಟ್ಟು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ನಗರ ಸಿವಿಲ್ ನ್ಯಾಯಾಲಯಕ್ಕೆ ಪ್ರದತ್ತವಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಪ್ರತಿಯೊಬ್ಬ ನ್ಯಾಯಾಧೀಶನು ಚಲಾಯಿಸಬಹುದು.

(2) ಮುಖ್ಯ ಸಿವಿಲ್ ನ್ಯಾಯಾಧೀಶನು ಉಚ್ಚ ನ್ಯಾಯಾಲಯದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಕಾಲಕಾಲಕ್ಕೆ ನಗರ ಸಿವಿಲ್ ನ್ಯಾಯಾಲಯದ ವ್ಯವಹಾರಗಳನ್ನು ತನ್ನ ನ್ಯಾಯಾಧೀಶರಿಗೆ ಹಂಚಿಕೆ ಮಾಡುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ವ್ಯವಸ್ಥೆ ಮಾಡಬಹುದು.

**6. ನಗರ ಸಿವಿಲ್ ನ್ಯಾಯಾಲಯದ ನಗರದ ಮುಖ್ಯ ಸಿವಿಲ್ ನ್ಯಾಯಾಧೀಶನ ಪದದ ತತ್ಕಾಲಿಕ ರಿಕ್ತತೆ.–** (1) ನಗರ ಮುಖ್ಯ ಸಿವಿಲ್ ನ್ಯಾಯಾಧೀಶನ ಮರಣ ಅಥವಾ ಅನಿರೀಕ್ಷಿತ ಅನಾರೋಗ್ಯದಿಂದ ಅಥವಾ ಇತರ ಆಕಸ್ಮಿಕಗಳಿಂದ ಅಥವಾ ರಜೆಯ ಮೂಲಕ ಅವನು ಗೈರು ಹಾಜರಿಯಿಂದ ಅಥವಾ ಯಾವುದೇ ಕಾರಣದಿಂದ ಅವನು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ ಅತ್ಯಂತ ಜ್ಯೇಷ್ಠ ನ್ಯಾಯಾಧೀಶನು ತನ್ನ ಸಾಮಾನ್ಯ ಕರ್ತವ್ಯಗಳನ್ನು ತ್ಯಜಿಸದೆ ನಗರ ಮುಖ್ಯ ನ್ಯಾಯಾಧೀಶನ ಪದದ ಪ್ರಭಾರವನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಆ ಪದಕ್ಕೆ ಯಥೋಚಿತವಾಗಿ ನೇಮಕನಾದ ನಗರ ಮುಖ್ಯ ಸಿವಿಲ್ ನ್ಯಾಯಾಧೀಶನು ಅಧಿಕಾರ ವಹಿಸಿಕೊಳ್ಳುವವರೆಗೆ, ಅದರ ಪ್ರಭಾರದಲ್ಲಿರುವುದು ಮುಂದುವರಿಯತಕ್ಕದ್ದು.

3. 1980ರ ತಿದ್ದುಪಡಿ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಬದಲಾಗಿ ಹಾಕಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ನಗರ ಮುಖ್ಯ ಸಿವಿಲ್ ನ್ಯಾಯಾಧೀಶನ ಪದದ ಪ್ರಭಾರದಲ್ಲಿರುವಾಗ ಅತ್ಯಂತ ಜ್ಯೇಷ್ಠ ನ್ಯಾಯಾಧೀಶನು ಈ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು ನೀಡಿದ ಸಾಮಾನ್ಯ ಅಥವಾ ವಿಶೇಷ ಅದೇಶಗಳಿಗೊಳಪಟ್ಟು, ನಗರ ಮುಖ್ಯ ಸಿವಿಲ್ ನ್ಯಾಯಾಧೀಶನ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಎಲ್ಲ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**7. ರಿಜಿಸ್ಟ್ರಾರ್ ಇತ್ಯಾದಿ.–** (1) ನಗರ ಸಿವಿಲ್ ನ್ಯಾಯಾಲಯಕ್ಕೆ ಒಬ್ಬ ರಿಜಿಸ್ಟ್ರಾರ್ ಇರತಕ್ಕದು ಮತ್ತು ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿ ನಿರ್ಧರಿಸಬಹುದಾದಷ್ಟು ಸಂಖ್ಯೆಯ ಉಪ ರಿಜಿಸ್ಟ್ರಾರ್‌ರನ್ನು ಮತ್ತು ಇತರ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.

(2) ಉಚ್ಚ ನ್ಯಾಯಾಲಯವು ಕರ್ನಾಟಕ ರಾಜ್ಯದ ನ್ಯಾಯಿಕ ಸೇವೆಯಲ್ಲಿರುವ ಒಬ್ಬ ಅಧಿಕಾರಿಯನ್ನು ನಗರ ಸಿವಿಲ್ ನ್ಯಾಯಾಲಯದ ರಿಜಿಸ್ಟ್ರಾರ್ ಆಗಿ ನೇಮಕ ಮಾಡಬಹುದು.

(3) ರಿಜಿಸ್ಟ್ರಾರನು, ನಗರ ಸಿವಿಲ್ ನ್ಯಾಯಾಲಯದ ಮುಖ್ಯ ಲಿಪಿಕ ಅಧಿಕಾರಿಯಾಗಿರತಕ್ಕದ್ದು.

(4) ಈ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು ಮಾಡಬಹುದಾದ [3a]ಆದೇಶಗಳಿಗೊಳಪಟ್ಟು, ರಿಜಿಸ್ಟ್ರಾರ್, ಉಪರಿಜಿಸ್ಟ್ರಾರ್ ಮತ್ತು ಇತರ ಸಿಬ್ಬಂದಿಯವರು ನಗರದ ಮುಖ್ಯ ಸಿವಿಲ್ ನ್ಯಾಯಾಧೀಶನು, ಕಾಲಕಾಲಕ್ಕೆ ಅವರಿಗೆ ವಹಿಸಿಕೊಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದು.

**8. ಅಧಿನಿಯಮದ ಮೇರೆಗೆ ದಾವೆ ಇತ್ಯಾದಿಗಳ ಸಂಬಂಧದಲ್ಲಿ ಉದ್ಭವಿಸಿದ ಪ್ರಶ್ನೆಗಳ ಬಗ್ಗೆ ಜಿಲ್ಲಾ ನ್ಯಾಯಾಲಯದ ಕಾನೂನಿನ ನಿರ್ವಹಣೆಗನುಸಾರವಾಗಿ ವ್ಯವಹರಿಸತಕ್ಕದ್ದು.–** ಈ ಅಧಿನಿಯಮದಲ್ಲಿ ಉಪಬಂಧಿಸಲಾದುದರ ಹೊರತಾಗಿ ಮತ್ತು ಸಂವಿಧಾನದ 227ನೇ ಅನುಚ್ಛೇದದ ಅಥವಾ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (1908ರ ಕೇಂದ್ರ ಅಧಿನಿಯಮ 5) 122ನೇ ಪ್ರಕರಣದ ಮೇರೆಗೆ ನಗರ ಸಿವಿಲ್ ನ್ಯಾಯಾಲಯಕ್ಕಾಗಿ ಉಚ್ಚ ನ್ಯಾಯಾಲಯವು ಮಾಡಬಹುದಾದ ನಿಯಮಗಳಿಗೊಳಪಟ್ಟು, ನಗರ ಸಿವಿಲ್ ನ್ಯಾಯಾಲಯದಲ್ಲಿ ಈ ಅಧಿನಿಯಮದ ಮೇರೆಗೆ ದಾವೆಗಳ ಅಥವಾ ಇತರ ವ್ಯವಹರಣೆಗಳ ಸಂಬಂಧದಲ್ಲಿ ಉದ್ಭವಿಸುವ ಎಲ್ಲ ಪ್ರಶ್ನೆಗಳನ್ನು ತತ್ಕಾಲದಲ್ಲಿ ಜಿಲ್ಲಾ ನ್ಯಾಯಾಲಯವು, ನಿರ್ವಹಿಸುತ್ತಿರುವ ಕಾನೂನಿಗನುಸಾರವಾಗಿ ನಿರ್ವಹಿಸತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

---

3a. 1980ರ ತಿದ್ದುಪಡಿ ಅಧಿನಿಯಮದ (1908ರ 23)ರ 5ನೇ ಪ್ರಕರಣದ ಮೇರೆಗೆ ಬದಲಾಗಿ ಹಾಕಲಾಗಿದೆ

**9. ಅಪೀಲುಗಳು ಮತ್ತು ಅವಧಿ ಪರಿಮಿತಿಗಳು.–** (1) ಸಿವಿಲ್ ಸ್ವರೂಪದ ದಾವೆಗಳ ಮತ್ತು ಇತರ ವ್ಯವಹರಣೆಗಳ ಸಂಬಂಧದಲ್ಲಿ ಒಂದು ಸಿವಿಲ್ ನ್ಯಾಯಾಲಯವು ಮಾಡಿದ ಡಿಕ್ರಿ ಮತ್ತು ಆದೇಶಗಳ ಮೇಲೆ ಕಾನೂನು ಮೂಲಕ ಅಪೀಲಿಗೆ ಅವಕಾಶ ಕಲ್ಪಿಸಿದ್ದರೆ ಅಂಥ ಅಪೀಲುಗಳನ್ನು ಉಚ್ಚ ನ್ಯಾಯಾಲಯಕ್ಕೆ ಮಾಡಿಕೊಳ್ಳತಕ್ಕದ್ದು.

(2) ನಗರ ಸಿವಿಲ್ ನ್ಯಾಯಾಲಯದ ಡಿಕ್ರಿ ಅಥವಾ ಆದೇಶದಿಂದ ಅಪೀಲು ಮಾಡುವ ಅವಧಿ ಪರಿಮಿತಿಯು ಅಂಥ ಡಿಕ್ರಿ ಅಥವಾ ಆದೇಶದ ದಿನಾಂಕದಿಂದ ತೊಂಬತ್ತು ದಿನಗಳಾಗಿರತಕ್ಕದ್ದು.

## ಅಧ್ಯಾಯ–III
### ಸಂಕೀರ್ಣ

**10. ನ್ಯಾಯಾಲಯದ ಮೊಹರು.–** ನಗರ ಸಿವಿಲ್ ನ್ಯಾಯಾಲಯವು ಕರ್ನಾಟಕ ರಾಜ್ಯದ ಚಿಹ್ನೆಯನ್ನು ಹೊಂದಿರುವ ಮೊಹರನ್ನು ಬಳಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಕಾರದಲ್ಲಿ ಅಂಥ ಭಾಷೆಯಲ್ಲಿ ನಗರ ಸಿವಿಲ್ ನ್ಯಾಯಾಲಯದ ಹೆಸರು ಇರತಕ್ಕದ್ದು.

**11. ರಜಾ ದಿನಗಳು ಮತ್ತು ದೀರ್ಘಾವಧಿ ರಜಾ ದಿನಗಳು.–** (1) ಸಮಗ್ರ ರಾಜ್ಯಕ್ಕೆ ಅಥವಾ ಬೆಂಗಳೂರು ನಗರಕ್ಕೆ ಸಾರ್ವಜನಿಕ ರಜಾ ದಿನಗಳೆಂದು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ದಿನಗಳಂದು ನಗರ ಸಿವಿಲ್ ನ್ಯಾಯಾಲಯವು ಮುಚ್ಚಿರತಕ್ಕದ್ದು.

(2) ನಗರ ಸಿವಿಲ್ ನ್ಯಾಯಾಲಯಕ್ಕೆ ಪ್ರತಿವರ್ಷ ಮೂರು ದೀರ್ಘ ರಜಾವಧಿಗಳಿರತಕ್ಕದು ಎಂದರೆ ಬೇಸಿಗೆ, ದಸರಾ ಮತ್ತು ಚಳಿಗಾಲ ಮತ್ತು ಸದರಿ ಮೂರು ದೀರ್ಘ ರಜಾವಧಿಗಳ ಒಟ್ಟು ಅವಧಿಯು ಮೂವತ್ತು ದಿನಗಳಿಗೆ ಮೀರತಕ್ಕದ್ದಲ್ಲ ಮತ್ತು ಉಚ್ಚ ನ್ಯಾಯಾಲಯವು ಪ್ರತಿಯೊಂದು ದೀರ್ಘ ರಜಾವಧಿಯ ಅವಧಿಯನ್ನು ನಿಗದಿ ಮಾಡತಕ್ಕದ್ದು.

(3) ಈ ಅಧಿನಿಯಮದಲ್ಲಿ ಅಥವಾ 1908 ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ (1908ರ ಕೇಂದ್ರ ಅಧಿನಿಯ 5) ಏನೇ ಇದ್ದರೂ, ಬೇಸಿಗೆಯ ದೀರ್ಘ ರಜಾವಧಿಯಲ್ಲಿ, ಶೀಘ್ರವಾಗಿ ಅಥವಾ ತತ್‌ಕ್ಷಣವಾಗಿ ವ್ಯವಹರಿಸಬೇಕಾದ ವಿಷಯಗಳ ಬಗ್ಗೆ ವಿಚಾರಣೆ ನಡೆಸಲು ಉಚ್ಚ ನ್ಯಾಯಾಲಯವು, ಅಧಿಸೂಚನೆಯ ಮೂಲಕ ನಗರ ಸಿವಿಲ್ ನ್ಯಾಯಾಲಯದ ಒಬ್ಬ ಅಥವಾ ಹೆಚ್ಚು ಜನ ನ್ಯಾಯಾಧೀಶರನ್ನು ದೀರ್ಘ ರಜಾವಧಿಯ ನ್ಯಾಯಾಧೀಶರನ್ನಾಗಿ ಅಥವಾ ಸಂದರ್ಭಾನುಸಾರ ನ್ಯಾಯಾಧೀಶರನ್ನಾಗಿ ನಾಮ ನಿರ್ದೇಶಿಸಬಹುದು ಮತ್ತು ಅಂಥ ನ್ಯಾಯಾಧೀಶನು ಅಥವಾ ನ್ಯಾಯಾಧೀಶರು ಅಂಥ ದೀರ್ಘ ರಜಾವಧಿಯಲ್ಲಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಗರ ಸಿವಿಲ್ ನ್ಯಾಯಾಲಯಕ್ಕೆ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ದೀರ್ಘ ರಜಾವಧಿಯ ನ್ಯಾಯಾಧೀಶ ಅಥವಾ ನ್ಯಾಯಾಧೀಶರೆಂದು ನಾಮನಿರ್ದೇಶನ ಮಾಡಿದ್ದರೂ, ಬೇಸಗೆಯ ದೀರ್ಘ ರಜೆಯ ಅವಧಿಯಲ್ಲಿ ನಗರ ಸಿವಿಲ್ ನ್ಯಾಯಾಲಯವು 1963ರ ಅವಧಿ ಪರಿಮಿತಿ ಅಧಿನಿಯಮದ (1963ರ ಕೇಂದ್ರ ಅಧಿನಿಯಮ 36) 4ನೇ ಪ್ರಕರಣದ ಉದ್ದೇಶಗಳಿಗಾಗಿ, ಮುಚ್ಚಲಾಗಿದೆ ಎಂದು ಭಾವಿಸತಕ್ಕದ್ದು.

**12. ಇತರ ಕಾನೂನುಗಳ ಸಂಬಂಧದಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ, ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ, ಮುನ್ಸಿಫ್ ನ್ಯಾಯಾಲಯಕ್ಕೆ, ಜಿಲ್ಲಾ ನ್ಯಾಯಾಧೀಶನಿಗೆ, ಸಿವಿಲ್ ನ್ಯಾಯಾಧೀಶನಿಗೆ ಮತ್ತು ಮುನ್ಸಿಫನಿಗೆ ಉಲ್ಲೇಖಗಳನ್ನು ಮಾಡುವುದು.–** (1) ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಆದರೆ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿದ್ದುದರ ಹೊರತಾಗಿ, ಜಿಲ್ಲಾ ನ್ಯಾಯಾಲಯಕ್ಕೆ, ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ಅಥವಾ ಮುನ್ಸೀಫರ ನ್ಯಾಯಾಲಯಕ್ಕೆ ಅಥವಾ ಜಿಲ್ಲಾ ನ್ಯಾಯಾಧೀಶನಿಗೆ ಸಿವಿಲ್ ನ್ಯಾಯಾಧೀಶನಿಗೆ ಅಥವಾ ಮುನ್ಸೀಫನಿಗೆ ಬೆಂಗಳೂರು ನಗರದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಸಂಬಂಧದಲ್ಲಿ ಮಾಡಿದ ಉಲ್ಲೇಖವನ್ನು ನಗರ ಸಿವಿಲ್ ನ್ಯಾಯಾಲಯಕ್ಕೆ ಅಥವಾ ಸಂದರ್ಭಾನುಸಾರ ನಗರ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶನಿಗೆ ಮಾಡಿದ ಉಲ್ಲೇಖವೆಂದು ಅರ್ಥ ಕಲ್ಪಿಸತಕ್ಕದ್ದು ಮತ್ತು ಅಂಥ ಕಾನೂನು ತದನುಸಾರವಾಗಿ ಪರಿಣಾಮಕಾರಿಯಾಗಿರತಕ್ಕದ್ದು.

(2) ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವದಲ್ಲಿ ಬೆಂಗಳೂರು ನಗರದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನ್ಯಾಯಾಧೀಕರಣದ ಅಥವಾ ಇತರ ಯಾವುದೇ ಪ್ರಾಧಿಕಾರಗಳ [3b]ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು

(ಕ) ಗೊತ್ತುಪಡಿಸಿದ ದಿನಾಂಕದಂದು ಮತ್ತು ದಿನಾಂಕದಿಂದ 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಜಿಲ್ಲಾ ನ್ಯಾಯಾಲಯ ಅಥವಾ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ ಅಥವಾ ಮುನ್ಸಿಫ್ ನ್ಯಾಯಾಲಯವು ಚಲಾಯಿಸುತ್ತಿದ್ದರೆ ಅಂಥ ನ್ಯಾಯಾಧೀಕರಣದ ಅಥವಾ ಇತರ [3b][ಪ್ರಾಧಿಕಾರದ ಅಧಿಕಾರವ್ಯಾಪ್ತಿ ಮತ್ತು] ಅಧಿಕಾರಗಳನ್ನು ನಗರ ಸಿವಿಲ್ ನ್ಯಾಯಾಧೀಶನು ಚಲಾಯಿಸತಕ್ಕದ್ದು.

**13. ನ್ಯಾಯಾಧೀಶನು ತಮಗೆ ಹಿತಾಸಕ್ತಿ ಇರುವ ದಾವೆಗಳ ವಿಚಾರಣೆ ನಡೆಸತಕ್ಕದ್ದಲ್ಲ.–** (1) ನಗರ ಸಿವಿಲ್ ನ್ಯಾಯಾಲಯದ ಯಾವ ನ್ಯಾಯಾಧೀಶನೂ, ಯಾವ ದಾವೆ ಅಥವಾ ವ್ಯವಹರಣೆಗಳಲ್ಲಿ ಅವನು ಒಬ್ಬ ಪಕ್ಷಕಾರನಾಗಿರುವನೋ ಅಥವಾ ವೈಯಕ್ತಿಕವಾಗಿ ಹಿತಾಸಕ್ತಿಯುಳ್ಳವನಾಗಿರುವನೋ ಆ ಯಾವುದೇ ದಾವೆ ಅಥವಾ ವ್ಯವಹರಣೆಯ ವಿಚಾರಣೆ ನಡೆಸತಕ್ಕದ್ದಲ್ಲ ಅಥವಾ ವ್ಯವಹರಣೆಗೆ ಸಂಬಂಧಿಸಿದ ಅಥವಾ ಅದರಿಂದ ಉದ್ಭವಿಸುವ ವ್ಯವಹರಣೆಗಳ ಬಗ್ಗೆ ನ್ಯಾಯನಿರ್ಣಯ ಕೊಡತಕ್ಕದ್ದಲ್ಲ.

(2) ಅಂಥ ದಾವೆ ಅಥವಾ ವ್ಯವಹರಣೆಯನ್ನು–

(ಕ) ನಗರ ಮುಖ್ಯ ಸಿವಿಲ್ ನ್ಯಾಯಾಧೀಶನ ಮುಂದೆ ತರಲಾಗಿದ್ದರೆ, ಕಾನೂನಿಗನುಸಾರವಾಗಿ ವಿಲೇ ಮಾಡುವುದಕ್ಕಾಗಿ, ಅದನ್ನು ಇತರ ಯಾವನೇ ನ್ಯಾಯಾಧೀಶನ ಮುಂದಿಡತಕ್ಕದ್ದು.

(ಖ)ಇತರ ಯಾವನೇ ನ್ಯಾಯಾಧೀಶನ ಮುಂದೆ ತರಲಾಗಿದ್ದರೆ ಅವನು ನಗರ ಮುಖ್ಯ ಸಿವಿಲ್ ನ್ಯಾಯಾಧೀಶನಿಗೆ ವಿದ್ಯಮಾನಗಳ ಬಗ್ಗೆ ವರದಿ ಮಾಡತಕ್ಕದ್ದು ಮತ್ತು ಅವನು ಆ ತರುವಾಯ ಅದನ್ನು ಕಾನೂನಿಗನುಸಾರವಾಗಿ ವಿಲೇ ಮಾಡುವುದಕ್ಕಾಗಿ, ಇತರ ಯಾವನೇ ನ್ಯಾಯಾಧೀಶನ ಮುಂದೆ ಇಡತಕ್ಕದ್ದು.

---

[3b] 1980ರ ತಿದ್ದುಪಡಿ ಅಧಿನಿಯಮದ [1980ರ 23] 6ನೇ ಪ್ರಕರಣದ ಮೇರೆಗೆ ಬದಲಾಗಿ ಹಾಕಲಾಗಿದೆ.

**14. ನಿಯಮ ರಚನಾಧಿಕಾರ.–** (1) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಉಚ್ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು ನಿಯಮಗಳನ್ನು ರಚಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ನಿಯಮವು ಅಂಥ ಯಾವುದೇ ನಿಯಮದ ಉಲ್ಲಂಘನೆಗಾಗಿ ಒಂದು ನೂರು ರೂಪಾಯಿಗಳಿಗೆ ಮೀರದ ದಂಡನೆಯನ್ನು ವಿಧಿಸುವ ಬಗ್ಗೆ ಮತ್ತು ಅಂಥ ದಂಡನೆಯನ್ನು ವಿಧಿಸುವ ಪ್ರಾಧಿಕಾರದ ಬಗ್ಗೆ ಉಪಬಂಧ ಕಲ್ಪಿಸಬಹುದು. ಹಾಗೆ ವಿಧಿಸಲಾದ ದಂಡನೆಯನ್ನು ಮ್ಯಾಜಿಸ್ಟ್ರೇಟನು ತನ್ನ ಸಾಮಾನ್ಯ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ವಿಧಿಸಿದ ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ ಅದನ್ನು ವಸೂಲ್ಮಾಡತಕ್ಕದ್ದು.

**15. 1961ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.–** 1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದಲ್ಲಿ– (1961ರ ಕರ್ನಾಟಕ ಅಧಿನಿಯಮ 22).

(ಕ) 3ನೇ ಪ್ರಕರಣದ (ಫ) ಖಂಡದ ಬದಲಾಗಿ ಈ ಕೆಳಕಂಡ ಖಂಡವನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ–

(ಫ)'ನ್ಯಾಯಾಲಯ' ಎಂದರೆ,

(i) [3c]ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಅಧಿನಿಯಮ 1979ರಲ್ಲಿ ಪರಿಭಾಷಿಸಿರುವಂತೆ ಬೆಂಗಳೂರು ನಗರದ ಪರಿಮಿತಿಗಳನ್ನು ಒಳಗೊಳ್ಳುವ ಪ್ರದೇಶದ ಸಂಬಂಧದಲ್ಲಿ ಲಘು ವ್ಯಾಜ್ಯಗಳ ನ್ಯಾಯಾಲಯ;

(ii) ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರದೇಶಗಳಲ್ಲಿ ಅಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿದ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ;

(iii) (i) ಮತ್ತು (ii)ನೇ ಉಪಖಂಡಗಳಲ್ಲಿ ಉಲ್ಲೇಖಿಸಲಾದ ಪ್ರದೇಶಗಳ ಹೊರತಾಗಿ ಇತರ ಪ್ರದೇಶಗಳ ಸಂಬಂಧದಲ್ಲಿ ಅಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿದ ಮುನ್ಸಿಫ್ ನ್ಯಾಯಾಲಯ;

---

3c 1980ರ ತಿದ್ದುಪಡಿ ಅಧಿನಿಯಮದ [1980ರ 23] ರ 7ನೇ ಪ್ರಕರಣದ ಮೇರೆಗೆ ಸೇರಿಸಲಾಗಿದೆ.

(ಖ)50ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ" ಎಂಬ ಪದಗಳಿಗೆ "ಲಘು ವ್ಯಾಜ್ಯಗಳ ನ್ಯಾಯಾಲಯ ಅಥವಾ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದು.

**16. 1962ರ ಕರ್ನಾಟಕ ಅಧಿನಿಯಮ 5ರ ತಿದ್ದುಪಡಿ.–** 1961ರ ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮದಲ್ಲಿ (1962ರ ಕರ್ನಾಟಕ ಅಧಿನಿಯಮ 5)

(1) 9ನೇ ಪ್ರಕರಣದಲ್ಲಿ

(ಎ) (viii)ನೇ ಖಂಡದ ಬದಲಾಗಿ ಕೆಳಕಂಡ ಖಂಡವನ್ನು ಪ್ರತಿಸ್ಥಾಪಿಸತಕ್ಕದು ಎಂದರೆ–

"(viii) 1973ರ ದಂಡ ಪ್ರಕ್ರಿಯಾ ಸಂಹಿತೆಯ (1974ರ ಕೇಂದ್ರ ಅಧಿನಿಯಮ 2) 389ನೇ ಪ್ರಕರಣದ 439ನೇ ಪ್ರಕರಣದ ಮತ್ತು 440ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ"

(ಬಿ) (ix)ನೇ ಖಂಡದಲ್ಲಿ "1898ರ ದಂಡ ಪ್ರಕ್ರಿಯಾ ಸಂಹಿತೆಯ 526 ಮತ್ತು 526ಎ ಪ್ರಕರಣದ ಮೇರೆಗೆ" ಎಂಬ ಪದಗಳಿಗೆ ಮತ್ತು ಅಂಕಿಗಳಿಗೆ ಬದಲಾಗಿ "1973ರ ದಂಡ ಪ್ರಕ್ರಿಯಾ ಸಂಹಿತೆಯ (1974ರ ಕೇಂದ್ರ ಅಧಿನಿಯಮ 2) 407ನೇ ಪ್ರಕರಣದ ಮೇರೆಗೆ" ಎಂಬ ಪದಗಳನ್ನು, ಆವರಣಗಳನ್ನು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(ಸಿ) (x)ನೇ ಖಂಡವನ್ನು ಲೋಪಿಸತಕ್ಕದ್ದು.

(ಡಿ) (xii)ನೇ ಖಂಡದ ತರುವಾಯ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು. ಎಂದರೆ

"(xiii) ಇಪ್ಪತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಮೌಲ್ಯದ ದಾವೆಗಳ ಮತ್ತು ವ್ಯವಹರಣೆಗಳ ಸಂಬಂಧದಲ್ಲಿ ನಗರ ಸಿವಿಲ್ ನ್ಯಾಯಾಲಯವು ಹೊರಡಿಸಿದ ಅಥವಾ ನಗರ ಸಿವಿಲ್ ನ್ಯಾಯಾಲಯದಿಂದ ಹೊರಡಿಸಲಾಗಿದೆಯೆಂದು ಭಾವಿಸಲಾದ ಡಿಕ್ರಿಗಳ ಅಥವಾ ಆದೇಶಗಳ ವಿರುದ್ಧವಾಗಿರುವ ಎಲ್ಲ ಅಪೀಲುಗಳು"

(2) 10ನೇ ಪ್ರಕರಣದಲ್ಲಿ–

(ಎ) (1)ನೇ ಖಂಡದ (ಬಿ) ಉಪಖಂಡದ ಬದಲಾಗಿ ಕೆಳಕಂಡವನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ–

"(ಬಿ) 1973ರ ದಂಡ ಪ್ರಕ್ರಿಯಾ ಸಂಹಿತೆಯ (1974ರ ಕೇಂದ್ರಾಧಿನಿಯಮ 2) 395ನೇ ಪ್ರಕರಣದ ಮೇರೆಗೆ"

(ಬಿ) (iii)ನೇ ಖಂಡವನ್ನು ಲೋಪಿಸತಕ್ಕದ್ದು.

**17. 1964ರ ಕರ್ನಾಟಕ ಅಧಿನಿಯಮ 11ರ ತಿದ್ದುಪಡಿ.–** 1964ರ ಕರ್ನಾಟಕ ಲಘು ವ್ಯಾಜ್ಯಗಳ ನ್ಯಾಯಾಲಯಗಳ ಅಧಿನಿಯಮದಲ್ಲಿ (1964ರ ಕರ್ನಾಟಕ ಅಧಿನಿಯಮ 11).

(1) 2ನೇ ಪ್ರಕರಣದಲ್ಲಿ,

(ಎ)(ಎ) ಖಂಡಕ್ಕೆ (ಎಎ) ಎಂದು ಪುನಃ ಅಕ್ಷರ ಕೊಡತಕ್ಕದ್ದು ಮತ್ತು ಹಾಗೆ ಅಕ್ಷರ ಕೊಡಲಾದ (ಎಎ) ಖಂಡಕ್ಕೆ ಮೊದಲು ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು.

(ಎ)"ಬೆಂಗಳೂರು ನಗರ" ಎಂಬುದಕ್ಕೆ 1979ರ ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಅಧಿನಿಯಮದಲ್ಲಿ ಕೊಡಲಾದ ಅರ್ಥವೇ ಇರತಕ್ಕದ್ದು.

(ಬಿ) (ಡಿ) ಖಂಡದ ಕೊನೆಯಲ್ಲಿ ಕೆಳಕಂಡ ಖಂಡವನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ

"ಮತ್ತು ಬೆಂಗಳೂರು ನಗರದಲ್ಲಿ ಲಘು ವ್ಯಾಜ್ಯಗಳ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನು"

(2) 4ನೇ ಪ್ರಕರಣದ ತರುವಾಯ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು ಎಂದರೆ:

"ಪರಂತು, ಬೆಂಗಳೂರು ನಗರದಲ್ಲಿ ಉಚ್ಚ ನ್ಯಾಯಾಲಯವು ಜಿಲ್ಲಾ ನ್ಯಾಯಾಧೀಶನನ್ನು ಲಘು ವ್ಯಾಜ್ಯಗಳ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನೆಂದು ಕರೆಯಲ್ಪಡುವ ನ್ಯಾಯಾಧೀಶನನ್ನಾಗಿ ನೇಮಕ ಮಾಡಬಹುದು".

(3) (2ಕ) 8ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದಲ್ಲಿ ಮೂರು ಸಾವಿರ ರೂಪಾಯಿಗಳು ಎಂಬ ಪದಗಳ ಬದಲಾಗಿ "ಹತ್ತು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(3)17ನೇ ಪ್ರಕರಣಕ್ಕೆ ಬದಲಾಗಿ ಕೆಳಕಂಡ ಪ್ರಕರಣವನ್ನು ಪ್ರತಿಸ್ಥಾಪಿಸತಕ್ಕದ್ದು ಎಂದರೆ.–

**"17. ಲಘು ವ್ಯಾಜ್ಯಗಳ ನ್ಯಾಯಾಲಯದ ಕೆಲವು ಆದೇಶಗಳಿಂದ ಅಪೀಲುಗಳು** ಸಂಹಿತೆಯ 104ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮತ್ತು ಉಪಬಂಧಿಸಲಾದ ವ್ಯಾಪ್ತಿಯವರೆಗೆ ಸಂಹಿತೆಯ 35ಎ ಮತ್ತು 95ಎ ಪ್ರಕರಣದ ಮೇರೆಗಿನ ಪ್ರತಿಯೊಂದು ಆದೇಶದ ವಿರುದ್ಧವಾಗಿ ಅಪೀಲು ಇರತಕ್ಕದ್ದು.

(ಕ) ಬೆಂಗಳೂರು ನಗರದಲ್ಲಿ ಲಘು ವ್ಯಾಜ್ಯಗಳ ನ್ಯಾಯಾಲಯದ ಆದೇಶವಾಗಿದ್ದರೆ ಉಚ್ಚ ನ್ಯಾಯಾಲಯಕ್ಕೆ,

(ಖ) 4 & 4b (ಇತರ) ಸಂದರ್ಭಗಳಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ"

(4) 20ನೇ ಪ್ರಕರಣದ (2)ನೇ ಉಪಪ್ರಕರಣದ ತರುವಾಯ ಕೆಳಕಂಡ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ–

(3) 1ನೇ ಮತ್ತು (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಬೆಂಗಳೂರು ನಗರದಲ್ಲಿಯ ಲಘು ವ್ಯಾಜ್ಯಗಳ ನ್ಯಾಯಾಲಯವು ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರತಕ್ಕದ್ದು ಮತ್ತು ಆಡಳಿತ ನಿಯಂತ್ರಣಕ್ಕೆ ಮತ್ತು ಅಧೀಕ್ಷಣೆಗೆ ಒಳಪಟ್ಟಿರತಕ್ಕದ್ದು.

(5) 21ನೇ ಪ್ರಕರಣದಲ್ಲಿ "ಅರವತ್ತು ದಿನಗಳು" ಎಂಬ ಪದಗಳಿಗೆ ಬದಲಾಗಿ "ಮೂವತ್ತು ದಿನಗಳು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದು.

**18. 1964ರ ಕರ್ನಾಟಕ ಅಧಿನಿಯಮ 21ರ ತಿದ್ದುಪಡಿ.–** 1964ರ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮದಲ್ಲಿ (1964ರ ಕರ್ನಾಟಕ ಅಧಿನಿಯಮ 21).

(1) 1ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ "ಸಮಗ್ರ ಕರ್ನಾಟಕ ರಾಜ್ಯ" ಎಂಬ ಪದಗಳಿಗೆ ಬದಲಾಗಿ "ಬೆಂಗಳೂರು ನಗರದ ಹೊರತಾಗಿ ಸಮಗ್ರ ಕರ್ನಾಟಕ ರಾಜ್ಯ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದು.

---

4 & 4b 1980ರ ತಿದ್ದುಪಡಿ ಅಧಿನಿಯಮದ (1980ರ 23) 8ನೇ ಪ್ರಕರಣದ ಮೇರೆಗೆ ಸೇರಿಸಲಾಗಿದೆ.

(2) 2ನೇ ಪ್ರಕರಣದಲ್ಲಿ–

(I) (ಎ) ಖಂಡದ ತರುವಾಯ ಕೆಳಕಂಡ ಖಂಡವನ್ನು ಸೇರಿಸತಕ್ಕದು, ಎಂದರೆ–

(ಎಎ) "ಬೆಂಗಳೂರು ನಗರ" ಎಂಬುದಕ್ಕೆ 1979ರ ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ಅಧಿನಿಯಮದಲ್ಲಿ ಅದಕ್ಕೆ ಕೊಟ್ಟ ಅರ್ಥವೇ ಇರತಕ್ಕದು.

(ii) (ಸಿ) ಖಂಡದಲ್ಲಿ ವಿವರಣೆಗೆ ಬದಲಾಗಿ ಕೆಳಕಂಡ ವಿವರಣೆಯನ್ನು ಪ್ರತಿಸ್ಥಾಪಿಸತಕ್ಕದು.

"ವಿವರಣೆ.– ಈ ಖಂಡದ ಉದ್ದೇಶಕ್ಕಾಗಿ ಬೆಂಗಳೂರು ರೆವಿನ್ಯೂ ಜಿಲ್ಲೆಯು ಬೆಂಗಳೂರು ನಗರವನ್ನು ಒಳಗೊಳ್ಳುವುದಿಲ್ಲ"

(3) 13ನೇ ಪ್ರಕರಣದಲ್ಲಿ (3)ನೇ ಉಪಪ್ರಕರಣದ ತರುವಾಯ, ಕೆಳಕಂಡ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ–

"(4) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ನೀಡಿದ ಅಧಿಸೂಚನೆಯ ಮೂಲಕ ಯಾವುದೇ ಜಿಲ್ಲಾ ನ್ಯಾಯಾಲಯದ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದ ಅಥವಾ ಮುನ್ಸೀಫನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು ವಿಭಿನ್ನವಾಗಿರುವಲ್ಲಿ ಉಚ್ಚ ನ್ಯಾಯಾಲಯವು ಅಂಥ ನ್ಯಾಯಾಲಯದ ಮುಂದೆ ಇತ್ಯರ್ಥವಾಗದೆ ಇರುವ ದಾವೆ, ಆವೇದನೆ, ಅಪೀಲು ಮತ್ತು ಇತರ ವ್ಯವಹಾರಗಳನ್ನು ವರ್ಗಾವಣೆ ಮಾಡಲು ಅವಶ್ಯಕವೆಂದು ತಾನು ಭಾವಿಸಬಹುದಾದಂಥ ಆದೇಶಗಳನ್ನು ಮಾಡಬಹುದು."

(4) 28ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ

(ಎ) "ಅರವತ್ತು ದಿನಗಳು" ಎಂಬ ಪದಗಳ ಬದಲಾಗಿ "ಮೂವತ್ತು ದಿನಗಳು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**19. ಇತ್ಯರ್ಥವಾಗದಿರುವ ದಾವೆ ಇತ್ಯಾದಿಗಳ ವರ್ಗಾವಣೆಗೆ ವಿಶೇಷ ಉಪಬಂಧಗಳು.–** (1) ಈ ಅಧಿನಿಯಮದ ಮೇರೆಗೆ ಹೂಡಬೇಕಾಗಿರುವ ದಾಖಲ್ಮಾಡಬೇಕಾಗಿರುವ ಅಥವಾ ಪ್ರಾರಂಭಿಸಬೇಕಾಗಿರುವಂಥ 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಜಿಲ್ಲಾ ನ್ಯಾಯಲಯ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ ಮತ್ತು ಮುನ್ಸೀಫ್ ನ್ಯಾಯಾಲಯಗಳ ಮುಂದೆ ಇತ್ಯರ್ಥವಾಗದಿರುವ ಎಲ್ಲ ದಾವೆಗಳನ್ನು ಅರ್ಜಿ ಮತ್ತು ಇತರ ವ್ಯವಹರಣೆಗಳನ್ನು ಅವುಗಳಿಗೆ ಸಂಬಂಧಿಸಿದ ಅಪೀಲುಗಳು ಮತ್ತು ಇತರ ವ್ಯವಹರಣೆಗಳನ್ನುಳಿದು ಗೊತ್ತುಪಡಿಸಿದ ದಿನಾಂಕದಂದು ನಗರ ಸಿವಿಲ್ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು ಮತ್ತು ಅಂಥ ದಾವೆಗಳನ್ನು ಅರ್ಜಿಗಳನ್ನು, ಆವೇದನೆಗಳನ್ನು ಮತ್ತು ಇತರ ವ್ಯವಹರಣೆಗಳನ್ನು ನಗರ ಸಿವಿಲ್ ನ್ಯಾಯಾಲಯದಲ್ಲಿ ಹೂಡಲಾಗಿದ್ದರೆ ದಾಖಲ್ಮಾಡಲಾಗಿದ್ದರೆ ಅಥವಾ ಪ್ರಾರಂಭಿಸಲಾಗಿದ್ದರೆ ಹೇಗೋ ಹಾಗೆ ನಗರ ಸಿವಿಲ್ ನ್ಯಾಯಾಲಯದ ಮೂಲಕ ಪ್ರಾರಂಭಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

(2) 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸದರಿ ಜಿಲ್ಲಾ ನ್ಯಾಯಾಲಯಗಳ ಅಥವಾ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದ ಮುಂದೆ ಇತ್ಯರ್ಥವಾಗದೇ ಇರುವ ಎಲ್ಲ ಅಪೀಲುಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹರಣೆಗಳನ್ನು ಗೊತ್ತುಪಡಿಸಿದ ದಿನಾಂಕದಂದು ನಗರ ಸಿವಿಲ್ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು ಮತ್ತು ಅವುಗಳನ್ನು

ಅಂಥ ನ್ಯಾಯಾಲಯದಲ್ಲಿ ಹೂಡಲಾಗಿದ್ದರೆ, ದಾಖಲ್ಮಾಡಲಾಗಿದ್ದರೆ, ಅಥವಾ ಪ್ರಾರಂಭಿಸಲಾಗಿದ್ದರೆ ಹೇಗೋ, ಹಾಗೇ ಅಂಥ ಅಪೀಲುಗಳ ಮತ್ತು ವ್ಯವಹರಣೆಗಳ ಬಗ್ಗೆ ವಿಚಾರಣೆ ನಡೆಸಲು ಈ ಮೂಲಕ ಅಧಿಕಾರ ಹೊಂದಿದ ಆ ನಗರ ಸಿವಿಲ್ ನ್ಯಾಯಾಲಯವು ಅವನ್ನು ವಿಲೆ ಮಾಡತಕ್ಕದು."

(3) ಗೊತ್ತುಪಡಿಸಿದ ದಿನಾಂಕಕ್ಕಿಂತ ಮೊದಲು 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಜಿಲ್ಲಾ ನ್ಯಾಯಾಲಯ, ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ ಮತ್ತು ಮುನ್ಸಿಫ್ ನ್ಯಾಯಾಲಯವು ಮಾಡಿದ ಡಿಕ್ರಿಗಳ ಮತ್ತು ಆದೇಶಗಳ ವಿರುದ್ಧವಾಗಿ ಮಾಡಿದ ಅಪೀಲುಗಳನ್ನು ಗೊತ್ತುಪಡಿಸದ ದಿನಾಂಕಕ್ಕಿಂತ ಮೊದಲು ದಾಖಲ್ಮಾಡದಿರುವಲ್ಲಿ ಗೊತ್ತುಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಉಚ್ಚ ನ್ಯಾಯಾಲಯದ ಮುಂದೆ ದಾಖಲ್ಮಾಡತಕ್ಕದ್ದು ಮತ್ತು ಅಂಥ ಎಲ್ಲ ಅಪೀಲುಗಳು ಈ ಅಧಿನಿಯಮದ ಮೇರೆಗೆ ನಗರ ಸಿವಿಲ್ ನ್ಯಾಯಾಲಯವು ಮಾಡಿದ ಡಿಕ್ರಿಗಳಿಗೆ ಮತ್ತು ಆದೇಶಗಳಿಗೆ ವಿರುದ್ಧವಾಗಿ ದಾಖಲ್ಮಾಡಿದ ಅಪೀಲುಗಳಾಗಿದ್ದರೆ ಹೇಗೋ ಹಾಗೆ ಎಂಬಂತೆ ಉಚ್ಚ ನ್ಯಾಯಾಲಯವು ಅವುಗಳನ್ನು ವಿಲೆ ಮಾಡತಕ್ಕದ್ದು.

(4) 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಜಿಲ್ಲಾ ನ್ಯಾಯಾಲಯ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ ಅಥವಾ ಮುನ್ಸಿಫ್ ನ್ಯಾಯಾಲಯದಿಂದ ಮಾಡಿದ ಡಿಕ್ರಿಯ ಅಥವಾ ಆದೇಶದ ಪುನರ್ವಿಲೋಕನಕ್ಕಾಗಿ ಮತ್ತು ಜಾರಿಗೊಳಿಸುವುದಕ್ಕಾಗಿ ಗೊತ್ತುಪಡಿಸಿದ ದಿನಾಂಕದಂದು ದಾಖಲ್ಮಾಡದಿದ್ದ ಆವೇದನೆಗಳನ್ನು ಗೊತ್ತುಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ನಗರ ಸಿವಿಲ್ ನ್ಯಾಯಾಲಯದಲ್ಲಿ ದಾಖಲ್ಮಾಡತಕ್ಕದ್ದು.

(5) (3)ನೇ ಉಪಪ್ರಕರಣದ ಅಥವಾ (4)ನೇ ಉಪಪ್ರಕರಣದ ಮೇರೆಗಿನ ಅಪೀಲನ್ನು ಅಥವಾ ಪುನರ್ವಿಲೋಕನವನ್ನು ಹೊರಡಿಸಿದ ಡಿಕ್ರಿ ಅಥವಾ ಆದೇಶಗಳ ವಿರುದ್ಧವಾಗಿ ಅಪೀಲುಗಾಗಿ ಅಥವಾ ಸಂದರ್ಭಾನುಸಾರ ಪುನರ್ವಿಲೋಕನಕ್ಕಾಗಿ ದಾಖಲ್ಮಾಡುವುದಕ್ಕಾಗಿ ಗೊತ್ತುಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ದಾಖಲ್ಮಾಡತಕ್ಕದು.

(6) (ಎ) "1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ ಮೇರೆಗಿನ ಆವೇದನೆಗಳು ಮತ್ತು ಅದಕ್ಕೆ ಸಂಬಂಧಿಸಿದ ವ್ಯವಹರಣೆಗಳು ಮತ್ತು ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೂಲಕ ಮಾಡಿದ ಯಾವುದೇ ತಿದ್ದುಪಡಿಯ ಅಥವಾ 1964ರ ಕರ್ನಾಟಕ ಲಘು ವ್ಯವಹಾರ ನ್ಯಾಯಾಲಯ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮ 11) 8ನೇ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಯ ಆಧಾರದಿಂದ ಲಘು ವ್ಯವಹಾರ ನ್ಯಾಯಾಲಯದಲ್ಲಿ ಹೂಡಬೇಕಾದ ದಾಖಲ್ಮಾಡಬೇಕಾದ ಅಥವಾ ಪ್ರಾರಂಭಿಸಬೇಕಾದ ಬೆಂಗಳೂರು ನಗರದ ಪರಿಮಿತಿಗಳೊಳಗೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಸಿವಿಲ್ ನ್ಯಾಯಾಧೀಶರ ಮತ್ತು ಮುನ್ಸೀಫರ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಎಲ್ಲ ದಾವೆಗಳು, ಆವೇದನೆಗಳು ಮತ್ತು ಇತರ ವ್ಯವಹರಣೆಗಳು ಗೊತ್ತುಪಡಿಸಿದ ದಿನಾಂಕದಂದು ಲಘು ವ್ಯವಹಾರಗಳ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಡತಕ್ಕದ್ದು ಮತ್ತು ಅದರ ಮುಂದೆ ಅವುಗಳನ್ನು ಹೂಡಲಾಗಿದ್ದರೆ ಅಥವಾ ಪ್ರಾರಂಭಿಸಲಾಗಿದ್ದರೆ ಹೇಗೋ ಹಾಗೇ ಆ ಸದರಿ ನ್ಯಾಯಾಲಯದಿಂದ ವಿಲೆ ಮಾಡಲ್ಪಡತಕ್ಕದ್ದು.

(ಬಿ) ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು ಜಾರಿಗೊಳಿಸಿದ ಡಿಕ್ರಿಯ ಮತ್ತು ಹೊರಡಿಸಿದ ಆದೇಶದ ಸಂಬಂಧದಲ್ಲಿ ಡಿಕ್ರಿಯನ್ನು ಜಾರಿಗೊಳಿಸಿದ ನ್ಯಾಯಾಲಯವು

(ಕ) 1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ (1961ರ ಕರ್ನಾಟಕ ಅಧಿನಿಯಮ 22) ಅಥವಾ 1964ರ ಕರ್ನಾಟಕ ಲಘು ವ್ಯವಹಾರ ನ್ಯಾಯಾಲಯ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮ 11) ಮೇರೆಗೆ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಅಂಥ ಡಿಕ್ರಿ ಅಥವಾ ಆದೇಶಗಳನ್ನು ಹೊರಡಿಸಿದ್ದರೆ ಲಘು ವ್ಯವಹಾರಗಳ ನ್ಯಾಯಾಲಯ ಬೆಂಗಳೂರು ಮತ್ತು

(ಖ) ಇತರ ಸಂದರ್ಭಗಳಲ್ಲಿ ನಗರ ಸಿವಿಲ್ ನ್ಯಾಯಾಲಯ,–

– ಎಂಬುದಾಗಿ ಭಾವಿಸತಕ್ಕದ್ದು.

---

5. 1980ರ ತಿದ್ದುಪಡಿ ಅಧಿನಿಯಮ (1980ರ 23)ರ 9ನೇ ಪ್ರಕರಣವನ್ನು ಪ್ರತಿಸ್ಥಾಪಿಸಲಾಗಿದೆ.
6. 1980ರ ತಿದ್ದುಪಡಿ ಅಧಿನಿಯಮ (1980ರ 23)ದ 9ನೇ ಪ್ರಕರಣದ ಮೇರೆಗೆ ಬದಲಾಗಿ ಹಾಕಲಾಗಿದೆ.

(ಸಿ) 1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ (1961 ಕರ್ನಾಟಕ ಅಧಿನಿಯಮ 22) ಮೇರೆಗೆ 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯವು ಹೊರಡಿಸಿದ ಡಿಕ್ರಿಯ ಅಥವಾ ಆದೇಶದ ಪುನರ್ವಿಲೋಕನ ಮತ್ತು ಜಾರಿಗೊಳಿಸುವುದಕ್ಕಾಗಿ ಆವೇದನೆಗಳನ್ನು ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು ದಾಖಲ್ಮಾಡಲಾಗಿರದಿದ್ದರೆ ಗೊತ್ತುಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಲಘು ವ್ಯಾಜ್ಯಗಳ ನ್ಯಾಯಾಲಯದಲ್ಲಿ ದಾಖಲ್ಮಾಡಬಹುದು.

(ಡಿ) (ಸಿ) ಖಂಡದ ಮೇರೆಗೆ ಪುನರ್ವಿಲೋಕನ ಮೇಲ್ಮನವಿಗಾಗಿ ಅಥವಾ ಜಾರಿಗೊಳಿಸುವುದಕ್ಕಾಗಿ ಆವೇದನೆಯನ್ನು ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು ಹೊರಡಿಸಿದ ಡಿಕ್ರಿ ಮತ್ತು ಆದೇಶದ ವಿರುದ್ಧ ಪುನರ್ವಿಲೋಕನಕ್ಕಾಗಿ ಅಥವಾ ಜಾರಿಗೊಳಿಸುವುದಕ್ಕಾಗಿ ಆವೇದನೆಯನ್ನು ದಾಖಲ್ಮಾಡಲು ಗೊತ್ತುಪಡಿಸಿದ ಅವಧಿಯು ಮುಕ್ತಾಯವಾಗುವ ಮೊದಲು ದಾಖಲ್ಮಾಡತಕ್ಕದ್ದು.

"(7) ಈ ಪ್ರಕರಣದ ಮೇರೆಗೆ ಮುಖ್ಯ ನಗರ ಸಿವಿಲ್ ನ್ಯಾಯಾಧೀಶನಿಗೆ ಅಥವಾ ನಗರ ಸಿವಿಲ್ ನ್ಯಾಯಾಲಯಕ್ಕೆ ಅಥವಾ ಲಘು ವ್ಯವಹಾರ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಟ್ಟ ಎಲ್ಲ ದಾವೆಗಳು, ಮನವಿಗಳು, ಆವೇದನೆಗಳು, ಅಪೀಲುಗಳು ಮತ್ತು ಇತರ ವ್ಯವಹರಣೆಗಳು ಯಾವ ದಿನಾಂಕಗಳಂದು 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನ್ಯಾಯಾಲಯಗಳಿಂದ ಅಥವಾ 12ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ನ್ಯಾಯಾಧಿಕರಣಗಳಿಂದ ಅಥವಾ ಪ್ರಾಧಿಕಾರಿಗಳಿಂದ ಸದರಿ ದಾವೆಗಳು, ಮನವಿಗಳು, ಆವೇದನೆಗಳು, ಅಪೀಲುಗಳು ಮತ್ತು ವ್ಯವಹರಣೆಗಳು ಮುಂದೂಡಲ್ಪಟ್ಟಿವೆಯೋ ಅಥವಾ ವಹಿಸಿಕೊಡಲಾಗಿದೆಯೋ ಆ ಅನುಕ್ರಮ ದಿನಾಂಕಗಳಂದು ಈ ಸಂಬಂಧದಲ್ಲಿನ ಮುಂದೂಡುವ ಅಥವಾ ವಹಿಸಿಕೊಡುವ ಆದೇಶಗಳನ್ನು ಮುಖ್ಯ ನಗರ ಸಿವಿಲ್ ನ್ಯಾಯಾಧೀಶನು, ನಗರ ಸಿವಿಲ್ ನ್ಯಾಯಾಲಯವು ಅಥವಾ ಸಂದರ್ಭಾನುಸಾರ ಲಘು ವ್ಯವಹಾರಗಳ ನ್ಯಾಯಾಲಯವು ಮಾಡಿದ್ದರೆ ಹೇಗೋ ಹಾಗೆ ಮುಖ್ಯ ನಗರ ಸಿವಿಲ್ ನ್ಯಾಯಾಧೀಶನಿಗೆ ನಗರ ಸಿವಿಲ್ ನ್ಯಾಯಾಲಯಕ್ಕೆ ಅಥವಾ ಸಂದರ್ಭಾನುಸಾರ ಲಘು ವ್ಯವಹಾರ ನ್ಯಾಯಾಲಯಕ್ಕೆ ವಹಿಸಿಕೊಡಲ್ಪಡತಕ್ಕದ್ದು ಮತ್ತು ವಿಚಾರಣೆ ನಡೆಸಲ್ಪಡತಕ್ಕದ್ದು ಮತ್ತು ಆ ಸಂಬಂಧದ ಪಕ್ಷಕಾರನು ಅಥವಾ ಪಕ್ಷಕಾರರು ಅಂಥ ವರ್ಗಾವಣೆಯ ನೋಟೀಸಿಗೆ ಹಕ್ಕುಳ್ಳವರಾಗತಕ್ಕದ್ದಲ್ಲ.

---

7. 1980ರ ತಿದ್ದುಪಡಿ ಅಧಿನಿಯಮದ (1980ರ 23) 9ನೇ ಪ್ರಕರಣದ ಮೇರೆಗೆ ಬದಲಾಗಿ ಹಾಕಲಾಗಿದೆ.

(8) (6)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು ನ್ಯಾಯಾಧಿಕರಣದ ಅಥವಾ 12ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಇತರ ಯಾವುದೇ ಪ್ರಾಧಿಕಾರದ ಅಧಿಕಾರಗಳನ್ನು ಚಲಾಯಿಸುತ್ತಿರುವ ಜಿಲ್ಲಾ ನ್ಯಾಯಾಲಯದ, ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದ, ಮುನ್ಸಿಫ್ ನ್ಯಾಯಾಲಯದ, ಜಿಲ್ಲಾ ನ್ಯಾಯಾಧೀಶನ, ಸಿವಿಲ್ ನ್ಯಾಯಾಧೀಶನ ಅಥವಾ ಮುನ್ಸಿಫ್‌ನ ಮುಂದೆ ಇತ್ಯರ್ಥವಾಗದೇ ಇರುವ ಎಲ್ಲ ಆವೇದನೆಗಳನ್ನು, ಅಪೀಲುಗಳನ್ನು,

ಅರ್ಜಿಗಳನ್ನು ಮತ್ತು ಇತರ ವ್ಯವಹರಣೆಗಳನ್ನು ಗೊತ್ತುಪಡಿಸಿದ ದಿನಾಂಕದಂದು ಸಂದರ್ಭಾನುಸಾರ ನಗರ ಸಿವಿಲ್ ನ್ಯಾಯಾಲಯಕ್ಕೆ ಅಥವಾ ನಗರ ಮುಖ್ಯ ನ್ಯಾಯಾಧೀಶನಿಗೆ ಅಥವಾ ಅವನು ನಾಮನಿರ್ದೇಶನ ಮಾಡಬಹುದಾದ ಯಾವನೇ ಇತರ ನ್ಯಾಯಾಧೀಶನಿಗೆ ವರ್ಗಾಯಿಸತಕ್ಕದ್ದು ಮತ್ತು ಮುಂದುವರಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

(9) ಉಚ್ಚ ನ್ಯಾಯಾಲಯವು–

(ಎ) 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಜಿಲ್ಲಾ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದಲ್ಲಿ ಮತ್ತು ಮುನ್ಸೀಫ್ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದ ದಾವೆಗಳನ್ನು, ಅರ್ಜಿಗಳನ್ನು ಆವೇದನೆಗಳನ್ನು ಮತ್ತು ಇತರ ವ್ಯವಹರಣೆಗಳನ್ನು ಗೊತ್ತುಪಡಿಸಿದ ದಿನಾಂಕದಂದು ನಗರ ಸಿವಿಲ್ ನ್ಯಾಯಾಲಯಕ್ಕೆ ವರ್ಗಾಯಿಸುವ ಸಂಬಂಧದಲ್ಲಿ.

(ಬಿ) 1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ (1961ರ ಕರ್ನಾಟಕ ಅಧಿನಿಯಮ 22) ಮೇರೆಗೆ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದ ಆವೇದನೆಗಳನ್ನು ಮತ್ತು ವ್ಯವಹರಣೆಗಳನ್ನು ಗೊತ್ತುಪಡಿಸಿದ ದಿನಾಂಕದಂದು ಲಘು ವ್ಯಾಜ್ಯಗಳ ನ್ಯಾಯಾಲಯಕ್ಕೆ ವರ್ಗಾಯಿಸುವುದಕ್ಕೆ ಸಂಬಂಧಿಸಿದಂತೆ.

(ಸಿ) ನಗರ ಸಿವಿಲ್ ನ್ಯಾಯಾಲಯದ ಮುಂದೆ ಇತ್ಯರ್ಥವಾಗದೇ ಇರುವ ವರ್ಗಾಯಿಸಲ್ಪಟ್ಟ ದಾವೆಗಳ ಅರ್ಜಿ ಆವೇದನೆಗಳ ಮತ್ತು ಇತರ ವ್ಯವಹರಣೆಗಳನ್ನು ದಾಖಲ್ಮಾಡುವ ಮತ್ತು ತರಿಸಿಕೊಳ್ಳುವ ಸಂಬಂಧದಲ್ಲಿ ಮತ್ತು

(ಡಿ) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಸಂಬಂಧದಲ್ಲಿ ಯಾವುದೇ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಅವಶ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರಬಹುದಾದಂಥ ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ಅಥವಾ ಆದೇಶಗಳನ್ನು ಮಾಡತಕ್ಕದ್ದು.

---

8. 1980ರ ತಿದ್ದುಪಡಿ ಅಧಿನಿಯಮದ (1980ರ 23) 9ನೇ ಪ್ರಕರಣದ ಮೇರೆಗೆ ಸೇರಿಸಲಾಗಿದೆ.

"(9ಕ) ಈ ಪ್ರಕರಣದ ಮೇರೆಗೆ ಯಾವುದೇ ದಾವೆ ಅಪೀಲು ಅಥವಾ ವ್ಯವಹರಣೆಯನ್ನು ಯಾವ ನ್ಯಾಯಾಧೀಶನಿಗೆ ಅಥವಾ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದೆಂಬ ಬಗ್ಗೆ ಯಾವುದೇ ಸಂಶಯ ಅಥವಾ ತೊಂದರೆ ಉಂಟಾದಲ್ಲಿ ಉಚ್ಚ ನ್ಯಾಯಾಲಯದಿಂದ ನಾಮ ನಿರ್ದೇಶಿತನಾದ ನ್ಯಾಯಾಧೀಶನು ಅಥವಾ ನ್ಯಾಯಾಲಯವು ಯಾರಿಗೆ ಅಥವಾ ಯಾವುದಕ್ಕೆ ಈ ಪ್ರಕರಣದ ಮೇರೆಗೆ ಸದರಿ ದಾವೆ ಅಪೀಲು ಅಥವಾ ವ್ಯವಹರಣೆಯನ್ನು ವರ್ಗಾಯಿಸತಕ್ಕದ್ದೋ ಆ ನ್ಯಾಯಾಧೀಶ ಅಥವಾ ಆ ನ್ಯಾಯಾಲಯ ಆಗಿರತಕ್ಕದ್ದು ಮತ್ತು ಉಚ್ಚ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು."

(10) ಸಂದೇಹಗಳನ್ನು ನಿವಾರಿಸುವುದಕ್ಕಾಗಿ ಗೊತ್ತುಪಡಿಸಿದ ದಿನಾಂಕದಂದು ಕರ್ನಾಟಕ ರಾಜ್ಯದಲ್ಲಿರುವ ಸಿವಿಲ್ ನ್ಯಾಯಾಲಯಗಳಿಗೆ ಅನ್ವಯವಾಗತಕ್ಕ 1967ರ ಕರ್ನಾಟಕ ಪ್ರಕ್ರಿಯಾ ನಿಯಮಗಳು ಮತ್ತು ಸಿವಿಲ್ ನ್ಯಾಯಾಲಯಗಳ ಪ್ರಕ್ರಿಯಾ ಮತ್ತು ಕಾರ್ಯವಿಧಾನಗಳನ್ನು ವಿನಿಯಮನ ಮಾಡುವ ನಿಯಮಗಳ ಉಪಬಂಧಗಳು ನಗರ ಸಿವಿಲ್ ನ್ಯಾಯಾಲಯಕ್ಕೆ ಅವು ತಿದ್ದುಪಡಿಯಾಗುವವರೆಗೆ ಮತ್ತು ಮಾರ್ಪಾಡು ಆಗುವವರೆಗೆ ಯಥೋಚಿತವಾಗಿ ಅನ್ವಯವಾಗತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

(11) 1949ರ ಬೆಂಗಳೂರು ನಗರ ಪೌರ ನಿಗಮ ಅಧಿನಿಯಮದಲ್ಲಿ (1949ರ ಕರ್ನಾಟಕ ಅಧಿನಿಯಮ LXIX) ಪರಿಭಾಷಿಸಿದ ಬೆಂಗಳೂರು ನಗರಕ್ಕಾಗಿ 1964ರ ಲಘು ವ್ಯಾಜ್ಯಗಳ ನ್ಯಾಯಾಲಯಗಳ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮ 11) 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಲಘು ವ್ಯಾಜ್ಯಗಳ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು ಗೊತ್ತುಪಡಿಸಿದ ದಿನಾಂಕದಿಂದ ಈ ಅಧಿನಿಯಮದಲ್ಲಿ ಪರಿಭಾಷಿಸಿದ ಹಾಗೆ ಬೆಂಗಳೂರು ನಗರದ ಪರಿಮಿತಿಗಳಾಗಿರತಕ್ಕದು.

---

9&10. 1980ರ ತಿದ್ದುಪಡಿ ಅಧಿನಿಯಮದ (1980ರ 23) 9ನೇ ಪ್ರಕರಣದ ಮೇರೆಗೆ ಸೇರಿಸಲಾಗಿದೆ.

**20. 1979ರ ಕರ್ನಾಟಕ ಅಧ್ಯಾದೇಶ ಕ್ರಮಾಂಕ 8ರ ನಿರಸನ.–** (1) 1979ರ ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಅಧ್ಯಾದೇಶವು (1979ರ ಕರ್ನಾಟಕ ಅಧ್ಯಾದೇಶ ಕ್ರಮಾಂಕ 8) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸಿತವಾಗಿದ್ದರೂ ಸದರಿ ಅಧ್ಯಾದೇಶದ ಮೇರೆಗೆ ಕೈಕೊಂಡ ಯಾವುದೇ ಕ್ರಮ ಅಥವಾ ಮಾಡಿದ ಅಥವಾ ಹೊರಡಿಸಿದ ಯಾವುದೇ ನೇಮಕ ಅಧಿಸೂಚನೆ, ಆದೇಶ, ಯೋಜನೆ, ನಿಯಮಗಳನ್ನು ಪ್ರಪತ್ರ ಅಥವಾ ಉಪವಿಧಿಯನ್ನು ಈ ಅಧಿನಿಯಮದ ಮೇರೆಗೆ ಕೈಕೊಳ್ಳಲಾಗಿದೆಯೆಂದು, ಮಾಡಲಾಗಿದೆಯೆಂದು ಅಥವಾ ಹೊರಡಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಸದರಿ ಅಧ್ಯಾದೇಶದ ಸಂಬಂಧದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು ಈ ಅಧೀನಿಯಮದ ಸಂಬಂಧದಲ್ಲಿ ಮಾಡಲಾದ ಉಲ್ಲೇಖವೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಸಂಬಂಧದಲ್ಲಿ ಮಾಡಲಾದ ಉಲ್ಲೇಖವೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಅಥವಾ ಹೊರಡಿಸಿದ ಯಾವುದೇ ನೇಮಕ, ಅಧಿಸೂಚನೆ, ಆದೇಶ, ಯೋಜನೆ, ನಿಯಮ, ಪ್ರಪತ್ರ ಉಪವಿಧಿಯ ಮೂಲಕ ರದ್ದಾಗದ ಹೊರತು ಮತ್ತು ಆವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

* * * * * *